ದಿವ್ಯಶಕ್ತಿಯಿಂದ ನನ್ನ ಅವನತಿಯ ವಿಷಯವನ್ನು ಮುದ್ದುವೀರಪ್ಪ ಮತ್ತು ಯಮುನಪ್ಪನವರ ತಲೆಯೊಳಗೆ ತೂರಿಬಿಟ್ಟೆ. ಲಾಕ್‌ಡೌನಿನ ಕಾರಣದಿಂದ ಯಾರೂ ಮನೆಯಿಂದ ಹೊರಗೆ ಕಾಲಿಡುವಂತಿಲ್ಲವಲ್ಲ. ಹಾಗಾಗಿ ಪ್ರತಿಭಟಿಸಲು ಯಾರೂ ಮುಂದೆ ಬರುತ್ತಿಲ್ಲ ಎಂದು ಮುದಿಜೀವಗಳಾದ ಅವರಿಬ್ಬರೂ ಮರುಗಿದ್ದನ್ನು ಬಿಟ್ಟರೆ ಯಾರೂ ಏನೂ ಮಾಡುವಂತಿರಲಿಲ್ಲ.

ನಾನಾದರೂ ಯಾಕೆ ಇಂಥ ಸಂಕೀರ್ಣ ಜಾಗದಲ್ಲಿ ಹುಟ್ಟಿದೆನೋ? ಎಂದು ಪರಿತಪಿಸಿದೆ. ನಾನು ಹುಟ್ಟಿದಾಗ ಎಂಥ ಕಾಡಿತ್ತಲ್ಲವೆ ಇಲ್ಲಿ. ಆದರೆ ನಾನಿಲ್ಲಿದ್ದೇನೆ ಎಂದೇ ಈ ರೀತಿ ಮನೆಗಳು, ರಸ್ತೆಗಳು ನಿರ್ಮಾಣವಾದದ್ದು. ಹಾಗಾಗಿ ನಾನು ಹುಟ್ಟಿದ್ದರಲ್ಲೇನೂ ತಪ್ಪಿಲ್ಲ ಎಂದು ನನಗೆ ನಾನೇ ಸಮಾಧಾನ ಹೇಳಿಕೊಂಡೆ. ಆಗ ಪದೇ ಪದೇ ಅನ್ನಿಸುತ್ತಿದ್ದದ್ದೇನೆಂದರೆ ನಾನು ಸ್ಥಾವರವಾಗುವುದರ ಬದಲು ಜಂಗಮವಾಗಬೇಕಿತ್ತೆಂಬುದು. ಹಾಗಾದರೂ ಆಗಿದ್ದರೆ, ಇಲ್ಲಲ್ಲದಿದ್ದರೆ ಇನ್ನೆಲ್ಲೋ ಬದುಕುಳಿಯಬಹುದಾಗಿತ್ತಲ್ಲ.

ಜನನಿಬಿಡವಾಗಿದ್ದ ನನ್ನ ಸುತ್ತಲಿನ ಜಾಗಗಳು ಈಗ ನಿರ್ಜನ ಪ್ರದೇಶಗಳಾಗಿದ್ದವು. ಎಲ್ಲರೂ ಗೃಹಬಂಧನದಲ್ಲಿದ್ದರು. ಕತ್ತರಿಸಿದ ಬೇರುಗಳಿಂದಾಗಿ ಇನ್ನೇನು ಜೋರಾದ ಒಂದು ಗಾಳಿ ಬೀಸಿದರೆ ಸಾಕು ಎತ್ತಲಾದರೂ ವಾಲಿ ಬಿದ್ದುಬಿಡುತ್ತಿದ್ದೇನೇನೋ. ಹಾಗಂತ ಯಾರಿಗೆ ಹೇಳುವುದು. ಕೇಳಬೇಕಾದವರು ಉರಿಯುತ್ತಿರುವ ಮನೆಗಳಲ್ಲಿ ಓಟೆಂಬ ಗಳಗಳನ್ನು ಹಿರಿಯಲು ಕಾಯುತ್ತಿದ್ದಾರೆ.

ಅಲ್ಲೆಲ್ಲೋ ಬಂಗಾಳ ಕೊಲ್ಲಿಯಲ್ಲಿ ಬೀಸುತ್ತಿರುವ ಆಂಫಾನ್ ಚಂಡಮಾರುತವೇನಾದರೂ ಇಲ್ಲಿ ಬೀಸಿದರೆ ಸಾಕು, ನಾನು ಬಿದ್ದು ವ್ಯಾಪಿಸಿಕೊಳ್ಳಲಿರುವ ಜಾಗದ ಕಲ್ಪನೆ ಜನಗಳಿಗಾಗುತ್ತದೆ. ಮುಖ್ಯಮಂತ್ರಿಯ ಆ ಪಂಚತಾರಾ ಹೋಟೆಲ್ ಕಟ್ಟಡ, ಎಂ.ಎಲ್.ಎ.ಯ ಬಂಗಾರದ ಅಂಗಡಿಯುಳ್ಳ ಐದಂತಸ್ತಿನ ಮಾಲ್‌ಗಳನ್ನೆಲ್ಲ ಆಪೋಷಣೆ ತೆಗೆದುಕೊಂಡುಬಿಡಬೇಕು ಎಂದು ನನ್ನ ಹೆಂಡತಿ ಹಲ್ಲು ಕಡಿದು ರೋಷ ವ್ಯಕ್ತಪಡಿಸಿದಳು. ಆದರೆ ಅದಕ್ಕೂ ಮುನ್ನ ನನ್ನ ಗತಿಯೇನಾದೀತು ಎಂಬುದೇ ನನಗೆ ಭಯ ಹುಟ್ಟಿಸುವ ಸಂಗತಿಯಾಗಿತ್ತು. ಒಂದೂ ಕೊಂಬೆಗಳು ನೇರವಾಗಿ ಉಳಿದಿರುವುದಿಲ್ಲ, ಎಲ್ಲವೂ ಲಟಲಟನೆಂದು ಮುರಿದುಕೊಂಡು ಬೀಳುತ್ತವೆ. ಅದರ ರಾಚುವಿಕೆಗೆ ಅದೆಷ್ಟು ಜನ, ಅದೆಷ್ಟು ಕಟ್ಟಡಗಳು ಬಲಿಯಾಗುತ್ತವೋ ಗೊತ್ತಿಲ್ಲ. ಆದರೆ ಅದೇ ವೇಳೆ ನನ್ನ ಎಲೆ, ಹರಿಗಳೆಲ್ಲ ಹರಿದು ಅಪ್ಪಚ್ಚಿಯಾಗಿಬಿಡುತ್ತವಲ್ಲ.

ನನ್ನ ಕೂಗು ಆ ತೂಫಾನಿಗೂ ಕೇಳಿಸಿತೆಂದು ಕಾಣುತ್ತದೆ. ಅರಬ್ಬೀ ಸಮುದ್ರದಿಂದ ಎದ್ದ ನಿಸರ್ಗ ಎಂಬ ಇನ್ನೊಂದು ಚಂಡಮಾರುತ ಕ್ಷಣಕ್ಷಣಕ್ಕೂ ಬಿರುಸನ್ನು ಪಡೆಯುತ್ತ ಕೇರಳ, ಕರ್ನಾಟಕ, ಗೋವಾ, ಮಹಾರಾಷ್ಟ್ರದ ಕರಾವಳಿಯನ್ನು ಗೋಚಿಕೊಂಡು ಇಡೀ ಪಶ್ಚಿಮ ಘಟ್ಟಗಳನ್ನು ಆಪೋಶನ ತೆಗೆದುಕೊಳ್ಳುವುದರಂತೆ ಅಪ್ಪಳಿಸಲಾರಂಭಿಸಿತು. ಒಂದು ಕಡೆ ಕೊರೋನಾದ ಆರ್ಭಟ, ಇನ್ನೊಂದು ಕಡೆ ಚಂಡಮಾರುತದ ರಣಚಂಡಿ ಅವತಾರ. ಕರಾವಳಿಯುದ್ದಕ್ಕೂ ಇದ್ದ ತೆಪ್ಪಗಳು, ದೋಣಿಗಳು, ಬೀಚಿನ ಪಕ್ಕಕ್ಕೆ ಕಟ್ಟಿಕೊಂಡಿದ್ದ ತೆಂಗಿನಗರಿ ಹೊದಿಕೆಯ ಹೋಟೆಲ್ಲುಗಳ ಸೂರುಗಳು ನೆಲದಿಂದ ಆಕಾಶಕ್ಕೆ ಹಾರಿ ಹಾರಿ ಬೀಳುತ್ತಿದ್ದವು. ಊರೊಳಗೆ ಮೌಲ್ಡ್ ಮನೆಗಳ ಮೇಲೆ ಕೂರಿಸಿದ್ದ ನೀರಿನ ಟ್ಯಾಂಕರುಗಳು ಗಾಳಿಪಟಗಳಂತೆ ಆಕಾಶದ ತುಂಬೆಲ್ಲ ಹಾರಾಡುತ್ತ ಕಾಮನಬಿಲ್ಲಿನ ಬಣ್ಣಗಳನ್ನು ಸೃಷ್ಟಿಸಿದಂತಿತ್ತು.

ನನ್ನ ನೆಮ್ಮದಿಯ ಆ ದಿನಗಳಲ್ಲಿ ಕಾಮನಬಿಲ್ಲನ್ನು ಕಂಡಾಗೆಲ್ಲ ನನ್ನ ಮನದೊಳಗೂ ಕಾಮನಬಿಲ್ಲು ಮೂಡಿದಂತೆ, ಆ ಬಣ್ಣದ ಮೋಹಕ್ಕೆ ಬಲಿಯಾಗಿ ನನ್ನ ಮೇಲೆಲ್ಲ ಆ ಬಣ್ಣಗಳು ಮೂಡಬಾರದೇ ಎಂದು ಕನವರಿಸುತ್ತಿದ್ದೆ. ಆ ಕಮಾನಿನಲ್ಲಿ ಉರುಳುರುಳಿ ಬಣ್ಣದ ಚಿಟ್ಟೆಯಾಗಿ ಹಾರಾಡುವಂಥ ಕನಸು ಕಾಣುತ್ತಿದ್ದೆ. ಆದರೆ ಈಗ ಬಣ್ಣ ಸೌಂದರ್ಯವರ್ಧಕವಾಗಿರದೇ ಇಡೀ ಭೂಮ್ಯಾಕಾಶದಲ್ಲೆಲ್ಲ ರುದ್ರನರ್ತನ ಮಾಡುತ್ತಿತ್ತು. ಕೆಂಧೂಳಿನ ಮಣ್ಣು ಮರಳಿನ ಕಣಗಳೆಲ್ಲ ಆಕಾಶದ ತುಂಬ ರಾರಾಜಿಸುತ್ತಿತ್ತು. ನನಗೆ ನೆನಪಿರುವಂತೆ ನೂರುನೂರೈವತ್ತು ವರ್ಷಗಳಿಂದೀಚೆಗೆ ಇಂಥ ಭೀಕರ ಬಿರುಗಾಳಿಯನ್ನು ನಾನು ನೋಡಿರಲಿಲ್ಲ. ಸಾಮಾನ್ಯವಾಗಿ ದೇಶದ ಪೂರ್ವ ಕರಾವಳಿಯಲ್ಲಿ ವರ್ಷಕ್ಕೆ ಒಂದೋ ಎರಡೋ ಚಂಡಮಾರುತಗಳು ಇದ್ದೇ ಇರುತ್ತವೆ. ಆದರೆ ಅರಬ್ಬೀ ಸಮುದ್ರದಲ್ಲಿ ಇಂಥ ಮಾರುತಗಳು ಬಹಳ ಕಡಿಮೆ. ಶಾಂತ ಮಹಾಸಾಗರದ ಪಕ್ಕದಲ್ಲಿರುವುದರಿಂದ ಇದೂ ಹೆಚ್ಚೂ ಕಡಿಮೆ ಶಾಂತವಾಗಿರುತ್ತದೆ. ಆದರೆ ಈ ಬಾರಿ ಮಾತ್ರ ಅದೇನು ಕೇಡಿಗೆ ಇಂಥ ಭಯಂಕರ ರೂಪ ಪಡೆದಿದೆಯೋ ಗೊತ್ತಿಲ್ಲ. ಸಮುದ್ರದಿಂದ ಗಂಟೆಗೆ ನೂರೈವತ್ತು ಕಿಲೋಮೀಟರ್ ವೇಗದಲ್ಲಿ ನುಗ್ಗಿಬಂದು ಅಪ್ಪಳಿಸುತ್ತಿದ್ದ ಅದರ ವೇಗ ಭೂಮಿಯ ಮೇಲೆ ನೂರಿಪ್ಪತ್ತು ಕಿಲೋಮೀಟರಿನ ಸ್ಪೀಡಿನಲ್ಲಿತ್ತು. ಅಲ್ಲಿಂದ ನನ್ನನ್ನು ತಲುಪಲು ಅದಕ್ಕೆ ಕೇವಲ ಎರಡುಎರಡೂವರೆ ಗಂಟೆ ಸಾಕಿತ್ತಷ್ಟೆ. ಅಷ್ಟರಲ್ಲಿ ಅದರ ವೇಗ ಕಡಿಮೆಯಾಗಿರುತ್ತದೆ, ಇಲ್ಲವೇ ಘಟ್ಟಕ್ಕೆ ಬಡಿದು ಅಲ್ಲಿನ ನನ್ನದೇ ಕುಲದ ಮರಗಿಡಗಳು ಅಪ್ಪಚ್ಚಿಯಾಗಿರುತ್ತವೆ ಎಂಬುದು ನಿಶ್ಚಿತವಾಗಿತ್ತು.

ಘಟ್ಟದ ಮೇಲಿರುವ ನನ್ನವರೆಗೂ ಬರುವ ವೇಳೆಗೆ ಅದರ ಬಿರುಸಿನ ಪ್ರಮಾಣ ಕಡಿಮೆಯಾಗಿರುತ್ತದೆಂಬ ಭರವಸೆ ನನಗೆ. ಆದರೂ ನನಗೇಕೆ ಈ ಜೀವದ ಮೇಲಿನ ಆಸೆ. ಐನೂರು ಇಪ್ಪತ್ತು ವರ್ಷ ಬದುಕಿದ್ದರೂ ಸಾಯುವುದಕ್ಕೇಕೆ ನನ್ನ ಮನಸ್ಸು ಇನ್ನೂ ಸಿದ್ಧವಾಗಿಲ್ಲ. ಇನ್ನೂ ಎಷ್ಟು ಕಾಲ ಇಲ್ಲೇ ಇರಬೇಕೆಂದು ಆ ಸ್ವಾರ್ಥಿ ಮನುಷ್ಯನಂತೆ ಹಂಬಲಿಸುತ್ತಿದ್ದೇನೆ ಎಂಬುದೇ ನನಗೂ ಗೊತ್ತಾಗುತ್ತಿರಲಿಲ್ಲ. ನನ್ನ ಈಡೇರಬೇಕಾದ ಆಸೆಗಳೇನಾದರೂ ಇನ್ನೂ ಇವೆಯೇ. ನೂರಾರು ವರ್ಷಗಳಿಂದ ಕಾಣದ ತಂತ್ರಜ್ಞಾನದ ವೇಗವನ್ನು ಕಳೆದ ಮೂವತ್ತು ವರ್ಷಗಳಲ್ಲಿ ಕಂಡಿದ್ದೇನೆ, ಅನುಭವಿಸಿದ್ದೇನೆ. ಒಂದಲ್ಲ ಒಂದು ವೇಳೆಯಲ್ಲಿ ದೊಡ್ಡದೊಡ್ಡ ವ್ಯಕ್ತಿಗಳಿಗೆಲ್ಲ ಆಧಾರವಾಗಿದ್ದೇನೆ. ಇನ್ನಾದರೂ ನಾನಿದ್ದು ಸಾಧಿಸಬೇಕಾದ್ದೇನಿದೆ. ನಾನು ಬದುಕುಳಿಯುವುದರಿಂದ ಏನಾದರೂ ಲಾಭವಿದೆಯೆಂದರೆ ಅದು ಮನುಷ್ಯನಿಗೆ ಮಾತ್ರ. ಆದರೆ ಆತನಿಗೇ ನಾನು ಬೇಡವಾಗಿರುವಾಗ ನಾನಾದರೂ ಯಾಕೆ ಬದುಕಿರಬೇಕು, ಒಂದಷ್ಟು ಜನರನ್ನು ಬಲಿ ತೆಗೆದುಕೊಂಡಾದರೂ ಸರಿ, ಬಿದ್ದುಹೋಗಿಬಿಡಬೇಕೆಂಬಷ್ಟು ಸಿಟ್ಟು ಬರುತ್ತಿತ್ತು. ಆದರೆ ನನ್ನ ಜಾಯಮಾನದಲ್ಲೇ ಒಂದೇ ಒಂದು ಜೀವವನ್ನು ತೆಗೆದಿಲ್ಲ, ಇನ್ನೂ ಉಳಿಸಿದ್ದೇನೆ ಬೇಕಾದರೆ. ಅಂಥದರಲ್ಲಿ ಕೊನೆಗಾಲದಲ್ಲಿ ನನಗೇಕೆ ಇಂಥ ದುರ್ಬುದ್ಧಿ. ಬುದ್ಧನಿಂದ ಹಿಡಿದು ಶ್ರೀ ಶ್ರೀ ಮಂಜುನಾಥಾನಂದ ಸ್ವಾಮೀಜಿಯವರೆಗೆ ಸದ್ಬುದ್ಧಿಯನ್ನು ನೀಡಿದ ನಾನಾದರೂ ಯಾಕಿಂಥ ಆಲೋಚನೆ ಮಾಡಬೇಕು. ಇಲ್ಲ, ಯಾರ ಜೀವಕ್ಕೂ ಅಪಾಯ ಒದಗಿಸುವುದಿಲ್ಲ. ಕೊನೇಪಕ್ಷ ನನ್ನ ಮೇಲೆ ಗೂಡು ಕಟ್ಟಿಕೊಂಡು ಮರಿ ಮಾಡಿಕೊಂಡಿರುವ ಪಕ್ಷಿಗಳಿಗೂ ಸಹ.

ಹಾಗೆಂದು ನೆನಪಾದ ತಕ್ಷಣ ಇನ್ನೂ ಉಳಿದಿದ್ದ ಎಂಟು ಹತ್ತು ಗೂಡುಗಳ ಪಕ್ಷಿಗಳಿಗೆ ಕೊಂಬೆ ರೆಂಬೆಯನ್ನು ಅಲುಗಾಡಿಸುವ ಮೂಲಕ ಬೇಗ ಖಾಲಿ ಮಾಡುವಂತೆ ಎಚ್ಚರಿಸಿದೆ. ಅಪಾಯದ ಮುನ್ಸೂಚನೆ ಅರಿತ ಅವುಗಳು ದಟ್ಟವಾಗಿಯೂ, ಭದ್ರವಾಗಿದ್ದ ಇದ್ದ ಮರಗಳನ್ನು ಆಯ್ದುಕೊಂಡು, ಮರಿಗಳ ಎಳೆ ರೆಕ್ಕೆಯನ್ನು ಬಿಡಿಸಿಕೊಂಡು ಸ್ವಲ್ಪಸ್ವಲ್ಪವೇ ದೂರ ಹಾರಿಸಿಕೊಂಡು ಹೋಗಿ ತಮ್ಮ ರಕ್ಷಣೆಯ ಗಮ್ಯ ಸೇರಿದವು.

ನನ್ನ ನಿರೀಕ್ಷೆಯಂತೆ ಸಂಜೆ ವೇಳೆಗೆ ಚಂಡಮಾರುತ ಸಮುದ್ರವನ್ನು, ಕರಾವಳಿಯನ್ನು, ಸಹ್ಯಾದ್ರಿ ಬೆಟ್ಟವನ್ನೂ ದಾಟಿಕೊಂಡು ಬಂದು ನನ್ನನ್ನು ಅಪ್ಪಳಿಸಿತು. ಅದರ ಜೊತೆ ಬಿರುಸಾದ ಭೀಕರವಾದ ಮಳೆ. ಮಳೆಯೆಂದರೆ ಎಂಥ ಮಳೆ. ನಾನು ಹಿಂದೆಂದೂ ಕಂಡಿರದಿದ್ದಂಥ ಮಳೆ. ಸೋನೆಮಳೆ, ತುಂತುರುಮಳೆ, ಜುಮುರುಮಳೆ, ಜಡಿಮಳೆ, ಬಿರುಮಳೆ, ಮಹಾಮಳೆಗಳಲ್ಲದೇ ಹಸ್ತೆಮಳೆ, ಚಿತ್ತೆಮಳೆ, ಆರಿದ್ರಾ ಮಳೆಗಳಂಥ ನೂರಾರು ಬಗೆಯ ಮಳೆಗಳನ್ನು ನೋಡಿರುವೆ. ಆದರೆ ಆಕಾಶಕ್ಕೇ ತೂತುಬಿದ್ದಂತೆ ಮೈಮರೆತು ಸುರಿಯುವ ಇಂಥ ರೌದ್ರ ಭೀಕರ ಮಳೆಯನ್ನು ಮಾತ್ರ ಇದುವರೆಗೂ ನೋಡಿರಲಿಲ್ಲ.

ಇಂಥ ಮಳೆಯನ್ನು ನೋಡಿರಲಿಲ್ಲವೆಂದರೆ ಗಂಟೆಗಟ್ಟಲೆ ಇದೇ ವೇಗದಲ್ಲಿ ಸುರಿದ ಮಳೆಯನ್ನು ನೋಡಿದ್ದೆ. ಆದರೆ ದಿನಗಟ್ಟಲೇ ಹೀಗೆ ಒಂದೇ ಬಿರುಸಿನಿಂದ ಅಪ್ಪಳಿಸುತ್ತಿದ್ದ ಮಳೆಯನ್ನು ನೋಡಿರಲಿಲ್ಲ ಎಂದರ್ಥ. ತೀರಾ ಇತ್ತೀಚೆಗೆ ಅಂದರೆ ಕಳೆದ ಶತಮಾನದ ಕೊನೆಯ ದಶಕದಲ್ಲಿ ಒಂದು ವರ್ಷ ನಾಲ್ಕೈದು ಬಾರಿ ಬಂದ ಇಂಥ ಅಡ್ಡ ಮಳೆಯನ್ನು ನೋಡಿದ್ದೆ. ದಿನಾಲು ಸಂಜೆ ಸಮೀಪಿಸುತ್ತಿದ್ದಂತೆಯೇ ದೊಡ್ಡ ಬಿರುಗಾಳಿ ಉತ್ತರ ದಿಕ್ಕಿನಿಂದ ಆರಂಭವಾಗುತ್ತಿತ್ತು. ಆದರೆ ಸರಿಸುಮಾರು ಒಂದೂವರೆ ಎರಡು ಗಂಟೆ ಸುರಿದು ತನ್ನೆಲ್ಲ ಬಿಸುಪನ್ನು ಸ್ಖಲಿಸಿಕೊಂಡಂತೆ